# ಬೆನ್ನು ನೋವು, ಸ್ಲಿಪ್ ಡಿಸ್ಕ್ ಇತ್ಯಾದಿ...



ನಾವೆಲ್ಲ ನಿತ್ಯ ಓಡುತ್ತೇವೆ. ನಡೆದು ಹೋದರೆ ಸಮಯ ವ್ಯರ್ಥವಾಗುವ ಭಯ ನಮ್ಮದು. ಧಾವಂತದ ಬದುಕಲ್ಲಿ ನಾವು ನೀರೆತ್ತುವುದಿಲ್ಲ. ಸ್ವಿಚ್ ಆನ್ ಮಾಡುತ್ತೇವೆ. ಬಗ್ಗುವುದಕ್ಕೆ ನಮಗೆ ಪುರುಸೊತ್ತಿಲ್ಲ. ಹೀಗಾಗಿ ಎಲ್ಲ ನಿಂತಲ್ಲೇ ಕೈಗೆ ಸಿಗುವ ವ್ಯವಸ್ಥೆ ಮಾಡಿಕೊಂಡಿರುತ್ತೇವೆ. ಕುಳಿತು ಏಳುವುದಕ್ಕೆ ನಮಗೆ ಆಯಾಸ. ಹೀಗಾಗಿ ಊಟಕ್ಕೂ ಟೇಬಲ್ ಬಂದಿದೆ.

ಸೌಕರ್ಯಗಳು ಬಂದ ಹಾಗೆ ದೇಹಕ್ಕೆ ಸಹಜವಾಗಿ ಸಿಗುತ್ತಿದ್ದ ವ್ಯಾಯಾಮ ಸಿಗುತ್ತಿಲ್ಲ. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಬೆನ್ನುನೋವು, ಸ್ಲಿಪ್ ಡಿಸ್ಕ್... ಇತ್ಯಾದಿ ಸಾಮಾನ್ಯ ತೊಂದರೆಗಳಂತೆ ದಾಖಲಾಗತೊಡಗಿವೆ. ಬೆನ್ನು ಉಳುಕಿತು ಎಂದು ಬರುವ ಬಹುದೊಡ್ಡ ಸಂಖ್ಯೆಯ ರೋಗಿಗಳು ಹೇಳುವ ಕಾರಣ ಏನು ಗೊತ್ತಾ?

'ಮನೆಯಲ್ಲಿ ವಿಶೇಷವಾಗಿತ್ತು. ಕರೆಂಟ್ ಇರಲಿಲ್ಲ. ಸಂಪಿನಿಂದ ಒಂದು ಬಿಂದಿಗೆ ನೀರು ಎತ್ತಿದೆ. ಅಷ್ಟೇ, ಬೆನ್ನು ಚುಳಕ್ ಅಂತು'

ಹೌದು, ಇಂಥ ತೊಂದರೆಗಳಿಂದ ಆಸ್ಪತ್ರೆಗಳಿಗೆ ಬರುವವರ ಸಂಖ್ಯೆ ಈಗ ಜಾಸ್ತಿಯಾಗಿದೆ. ಹಾಗೆ ಬಂದವರಿಗೆ ಆಪರೇಷನ್ ಇಲ್ಲದೇ ಗುಣಪಡಿಸಿದ್ದೇವೆ ಎಂದು ಧೈರ್ಯದಿಂದ ಹೇಳುವ ವೈದ್ಯರ ಸಂಖ್ಯೆ ಮಾತ್ರ ಬಹಳಷ್ಟಿಲ್ಲ. ಆದರೆ ಆ ಮಾತನ್ನು ಧೈರ್ಯವಾಗಿ ಹೇಳುತ್ತಾರೆ ಆಯುರ್ವೇದ ವೈದ್ಯ ಡಾ. ಪ್ರಶಾಂತ ಎಸ್. ಆಚಾರ್ಯ.

ದೊಡ್ಡಬಳ್ಳಾಪುರದಲ್ಲಿ ಆತ್ರೇಯ ಆಯುರ್ವೇದಿಕ್ ಕಾಲೇಜು ಆರಂಭವಾಗಿದೆಯಲ್ಲ, ಅದರ ಮ್ಯಾನೇಜಿಂಗ್ ಟ್ರಸ್ಟಿ ಕೂಡ ಇವರೇ. 'ಚಂದ್ರ ನಿಮ್ಮ ಗುರಿಯಾಗಿರಲಿ. ಆಗ ಕಡೇಪಕ್ಷ ನಕ್ಷತ್ರಗಳನ್ನಾದರೂ ತಲುಪಲು ಸಾಧ್ಯ' ಎಂಬ ನಂಬುಗೆಯಲ್ಲಿ ಮುನ್ನಡೆದಿರುವ ಆಚಾರ್ಯ ಆಯುರ್ವೇದವೇ 21ನೇ ಶತಮಾನದ ಜೀವನಶೈಲಿ ಎನ್ನುತ್ತಾರೆ.

ವಿಶಿಷ್ಟ ಸೇವಾ ಯೋಜನೆಯೊಂದಿಗೆ ಉತ್ಸಾಹೀ ತರುಣ ವೈದ್ಯರ ತಂಡವಿರುವ ಈ ಆರೋಗ್ಯ ಕೇಂದ್ರ, ನಗರ ಪರಿಸರದ ಉದ್ವೇಗದ ಬದುಕಿನ ಹತ್ತಾರು ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ನಿರತವಾಗಿದೆ. ಚಿಕ್ಕ ಕುಟುಂಬವಾದರೂ ಮನೆಯ ಒಳಗೂ, ಹೊರಗೂ ದುಡಿಯುವ ಹೊಣೆ, ಮನೆಯಲ್ಲಿ ಹೊಣೆಗಾರಿಕೆ ಹೊತ್ತು ಮಾರ್ಗದರ್ಶನ ನೀಡುವ ಹಿರಿಯರ ಅನುಪಸ್ಥಿತಿ, ನೆರವಿನ ಅನಿವಾರ್ಯತೆ ಕೆಲವು ಸಂದರ್ಭಗಳಲ್ಲಿ ಹಿರಿಯರಿದ್ದರೂ ಸೂಕ್ತ ನೆರವು ನೀಡಲಾಗದ ಪರಿಸ್ಥಿತಿ ಅಥವಾ ಅವರನ್ನು ಕಾಡುವ ವೃದ್ಧಾಪ್ಯದ, ಅನಾರೋಗ್ಯದ ಅಸಹಾಯಕತೆ, ಈ ಎಲ್ಲಾ ಸಮಸ್ಯೆಗಳಿಂದ ಬಳಲುವವರಿಗೆ ಅರ್ಥ್ ಆರೋಗ್ಯ ಕೇಂದ್ರ ಸಹಾಯ ಹಸ್ತ ನೀಡುತ್ತಿದೆ.

1999ರ ಆಗಸ್ಟ್ 24ರಂದು ಆರಂಭಗೊಂಡ ಅರ್ಥ್ ಕೇಂದ್ರದಲ್ಲಿ ಆಸ್ಟಿಯೋ ಪೊರೋಸಿಸ್ ಜಠರ ಸಮಸ್ಯೆ, ಮೂಳೆ ಜಾರುವಿಕೆ, ಮಧುಮೇಹ, ಒತ್ತಡದ ಸಮಸ್ಯೆ, ಲೈಂಗಿಕ ಸಮಸ್ಯೆ, ಬಂಜೆತನ, ನಿದ್ರೆ ಸಂಬಂಧಿತ ರೋಗ, ಸ್ತ್ರೀ ರೋಗವ್ಯಾಧಿ, ಚರ್ಮರೋಗ, ಅಸ್ತಮಾ, ಕಿಡ್ನಿಯಲ್ಲಿ ಕಲ್ಲು ಹಾಗೂ ಕಂಪ್ಯೂಟರ್‌ನ ಸತತ ಬಳಕೆಯಿಂದ ತಲೆದೋರುವ ದೃಷ್ಟಿ ಸಂಬಂಧಿ ತೊಂದರೆಗಳು, ತಲೆನೋವು, ಬೆನ್ನು ಮತ್ತು ಭುಜದ ನೋವು, ಮಾನಸಿಕ ಒತ್ತಡ ಹೀಗೆ ಹತ್ತಾರು ತೊಂದರೆಗಳಿಗೆ ಇಲ್ಲಿ ಪರಿಹಾರವಿದೆ. ಇಂಥ 900ಕ್ಕೂ ಹೆಚ್ಚು ರೋಗಿಗಳು ಇಲ್ಲಿ ಗುಣಮುಖರಾಗಿದ್ದಾರಂತೆ.

ಅರ್ಥ್‌ನ ನಿರ್ದೇಶಕ ಡಾ। ಪ್ರಶಾಂತ್ ಎಸ್ ಆಚಾರ್ಯ. 'ನಮ್ಮ ಈ ಕೇಂದ್ರದಲ್ಲಿ ಅನುಭವಸ್ಥ ಆಯುರ್ವೇದ ತಜ್ಞರಿದ್ದಾರೆ. ಸಂಪೂರ್ಣ ಅರ್ಹತೆಯ ತರಬೇತಿಯುಳ್ಳ ತರುಣ ವೈದ್ಯರ ತಂಡವಿದೆ, ಮತ್ತು ಪಂಚಕರ್ಮ ಪರಿಣಿತರಾದ ನಾವು ಹೆಚ್ಚು ಜನರಿಗೆ ಪಂಚ ಕರ್ಮ ಚಿಕಿತ್ಸೆ ನೀಡುವಲ್ಲಿ ಯಶಸ್ವಿಯಾಗಿದ್ದೇವೆ. ಚಿಕಿತ್ಸೆಯೂ ಉತ್ತಮವಾಗಿದೆ. ಕಾರ್ಯವಿಧಾನ ವಿಶಿಷ್ಟವಾಗಿದೆ. ಚಿಕಿತ್ಸೆ ನೀಡುವ ಕಾರ್ಯದಲ್ಲಿ ಯಾವುದೇ ತರಹದ ರಾಜಿ ಇಲ್ಲ ಮತ್ತು ಪ್ರತಿ ರೋಗಿಯನ್ನೂ ವಿಶೇಷ ಕಾಳಜಿ ವಹಿಸಿ ನೋಡಲಾಗುತ್ತದೆ' ಎಂದು ಅವರು ಹೇಳುತ್ತಾರೆ.

ಇದರ ಜತೆಗೆ ಇಲ್ಲಿ ಪ್ರತಿ ರೋಗಿಯ ಚಿಕಿತ್ಸೆಯ ಹಂತಗಳನ್ನು ದಾಖಲು ಮಾಡಲಾಗುತ್ತದೆ. ಅವುಗಳನ್ನು ಕ್ರೋಢೀಕರಿಸಿ ಮುಂದೇನಾದರೂ ತೊಂದರೆ ಬಂದರೆ ಹಿಂದಿನ ಚಿಕಿತ್ಸಾ ದಾಖಲಾತಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತಾರೆ. 'ನಮ್ಮ ಚಿಕಿತ್ಸಾ ಕೇಂದ್ರದಲ್ಲಿ ಆಧುನಿಕ ಸಲಕರಣೆಗಳಿವೆ. ಪ್ರಪಂಚದಲ್ಲಿ ಕಂಡು ಬರುವ ಯಾವುದೇ ತರಹದ ಹೊಸ ಬಗೆಯ ರೋಗಗಳಿಗೆ ಸಂಶೋಧನಾ ಕಾರ್ಯದಲ್ಲಿ ತೊಡಗಿ, ಆಯುರ್ವೇದ ವೈದ್ಯ ಪದ್ಧತಿಯ ಮೂಲಕ ಹೋಗಲಾಡಿಸಲು ಪ್ರಯತ್ನ ಮಾಡುತ್ತೇವೆ. ದೇಶಾದ್ಯಂತ ಮತ್ತು ಸಿಂಗಪುರ್‌ನಲ್ಲಿಯೂ ನಾವು ಚಿಕಿತ್ಸೆಯ ಸಲಹೆಗಳನ್ನು ನೀಡುತ್ತಾ ಬಂದಿದ್ದೇವೆ ಎಂದು ಆಚಾರ್ಯ ಹೇಳುತ್ತಾರೆ.

**ವಿಳಾಸ:** ಅರ್ಥ್-ಆಯುರ್ವೇದಿಕ್ ಹೆಲ್ತ್ ಸೆಂಟರ್, ನಂ.22, 515-ಆ.ಬ.ಡಬ್ಲೂ ಲೇಟ್, 2ನೇ ಕ್ರಾಸ್, ಎಚ್. ಎ. ಎಲ್. ಮೂರನೇ ಹಂತ, ನ್ಯೂ ತಿಪ್ಪಸಂದ್ರ, ಬೆಂಗಳೂರು. ದೂ. ಸಂ:080-25288630/ 25254654

